ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ
KARNATAKA LEGISLATIVE ASSEMBLY, RESEARCH AND REFERENCE BRANCH
ಪತ್ರಿಕಾ ತುಣುಕುಗಳು
PAPER CLIPPINGS
ಶಾಖೆ / ವಿಷಯ : DEPARTMENT / SUBJECT:
ಪತ್ರಿಕೆಯ ಹೆಸರು : NAME OF THE NEWS PAPER:
ದಿನಾಂಕ : DATE:

# ಉಪಸಭಾಪತಿ ಚುನಾವಣೆ ಬಳಿಕ ಸ್ಪೀಕರ್ ಪದತ್ಯಾಗ

**ಸಂ.ಕ.ಸಮಾಚಾರ ಬೆಂಗಳೂರು**

ವಿಧಾನ ಪರಿಷತ್ ಸಭಾಪತಿ ವಿರುದ್ಧ ಬಿಜೆಪಿ ಹಾಗೂ ಜೆಡಿಎಸ್ ಅವಿಶ್ವಾಸ ನಿರ್ಣಯದ ನೋಟೀಸ್ ನೀಡಿದ್ದು, ಸಭಾಪತಿ ರಾಜೀನಾಮೆಗೆ ಒತ್ತಡ ಹೇರುತ್ತಿರುವುದಾಗಿ ತಿಳಿದುಬಂದಿದೆ.

ಜನವರಿ 28 ರಿಂದ ಜಂಟಿ ಅಧಿವೇಶನ ಆರಂಭವಾಗಲಿದ್ದು, ಅಧಿವೇಶನ ಆರಂಭಕ್ಕೂ ಮುನ್ನವೇ ಸಭಾಪತಿ ತಮ್ಮ ಸ್ಥಾನಕ್ಕೆ ರಾಜೀನಾಮೆ ನೀಡಬೇಕೆಂಬ ಕಾರಣಕ್ಕೆ ಜನವರಿ 13 ರಂದು ಬಿಜೆಪಿ ಸದಸ್ಯರು ನೋಟೀಸ್ ನೀಡಿದ್ದಾರೆ. ಆದರೆ, ಉಪ ಸಭಾಪತಿ ಸ್ಥಾನವೂ ಖಾಲಿ ಇರುವುದರಿಂದ ಉಪ ಸಭಾಪತಿ ಸ್ಥಾನಕ್ಕೆ ಜನವರಿ 29 ರಂದು ಚುನಾವಣೆ ನಡೆಸಿ, ಬಳಿಕ ಉಪ ಸಭಾಪತಿಗೆ ರಾಜೀನಾಮೆ ನೀಡಲು ಸಭಾಪತಿ ಕೆ.ಪ್ರತಾಪ ಚಂದ್ರ ಶೆಟ್ಟಿ ನಿರ್ಧರಿಸಿದ್ದಾರೆ ಎಂದು ಹೇಳಲಾಗಿದೆ.

ಸಭಾಪತಿ ಅವರು ತಮ್ಮ ರಾಜೀನಾಮೆಯನ್ನು ಉಪ ಸಭಾಪತಿಗೆ ನೀಡಬೇಕು. ಈಗ ಉಪಸಭಾಪತಿ ಸ್ಥಾನ ಖಾಲಿ ಇರುವ ಹಿನ್ನಲೆಯಲ್ಲಿ ಹಾಗೂ ಧರ್ಮೇಗೌಡರ ನಿಧನವನ್ನು ನೋಟಿಫಿಕೇಷನ್ ಹೊರಡಿಸಿರುವ ಹಿನ್ನಲೆಯಲ್ಲಿ ಸಭಾಪತಿ ಅವರು ರಾಜ್ಯಪಾಲರಿಗೆ ರಾಜೀನಾಮೆ ನೀಡಬೇಕಾಗುತ್ತದೆ.



- ಸಾಂವಿಧಾನಿಕ ಹುದ್ದೆ ಖಾಲಿ ಬಿಡುವಂತಿಲ್ಲ
- ಜಂಟಿ ಅಧಿವೇಶನ ಹಿನ್ನೆಲೆಯಲ್ಲಿ ನಿರ್ಧಾರ

ಸಭಾಪತಿ ಮತ್ತು ಉಪ ಸಭಾಪತಿ ಎರಡೂ ಸಾಂವಿಧಾನಿಕ ಸ್ಥಾನಗಳನ್ನು ಖಾಲಿ ಉಳಿಸಿಕೊಂಡು ಜಂಟಿ ಅಧಿವೇಶನ ನಡೆಸಲು ಅಸಾಧ್ಯ. ಹಾಗಾಗಿ ಸಭಾಪತಿ ರಾಜೀನಾಮೆ ಬಳಿಕ ರಾಜ್ಯಪಾಲರು ದಿನಾಂಕ ನಿಗದಿಗೊಳಿಸಿ ಚುನಾವಣೆ ನಡೆಸುವಂತೆ ಸೂಚಿಸಬೇಕು. ಇದಕ್ಕೂ ಸಧ್ಯಕ್ಕೆ ಕಾಲಾವಕಾಶವಿಲ್ಲ. ಹೀಗಾಗಿ ಜಂಟಿ ಅಧಿವೇಶನ ಸಮಾವೇಶಗೊಂಡ ಮರು ದಿನ ಉಪ ಸಭಾಪತಿ ಚುನಾವಣೆ ನಡೆಸಿ ಬಳಿಕ ಅವರಿಗೆ ರಾಜೀನಾಮೆ ಸಲ್ಲಿಸುವ ಚಿಂತನೆಯನ್ನು ಸಭಾಪತಿ ಪ್ರತಾಪ್ ಚಂದ್ರ ಶೆಟ್ಟಿ ಅವರು ಮಾಡಿದ್ದಾರೆ ಎಂಬ ಮಾಹಿತಿ ಲಭ್ಯವಾಗಿದೆ.

ಡಿಸೆಂಬರ್ 15ರಂದು ಮೇಲ್ಮನೆಯಲ್ಲಿ ಘಟಿಸಿದ ಗಲಾಟೆ ಪ್ರಕರಣ ವಿಚಾರಣೆ ನೇಮಿಸಿರುವ ಸದನ . ಸಮಿತಿ ಸದನಕ್ಕೆ ಅಷ್ಟರಲ್ಲಿ ಮಧ್ಯಂತರ ವರದಿ ಸಲ್ಲಿಸಲು ಸಿದ್ಧತೆ ನಡೆಸಿದೆ. ಈ ಸಂಬಂಧ ಗುರುವಾರ ಮಧ್ಯಂತರ ವರದಿಯ ಕರಡು ಪರಿಶೀಲನಾ ಸಮಿತಿ ಸಭೆ ಏರ್ಪಾಡಾಗಿದೆ.